**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 562/2023 |
| ಡಿ.ಡಬ್ಲ್ಯೂ | 1 |

| | | |
|---|---|---|
| ಹೆಸರು | :- | ಮಹೇಶ ತಳ್ಳಿ ಅಲಿಯಾಸ್ ಮುದಕನ್ನವರ |
| ತಂದೆ/ಗಂಡನ ಹೆಸರು | :- | ಜಕ್ಕಪ್ಪ |
| ವಯಸ್ಸು | :- | 40 ವರ್ಷ |
| ಉದ್ಯೋಗ | :- | ಕೃಷಿ |
| ವಾಸಸ್ಥಳ | :- | ತೇರದಾಳ |

ಸಾಕ್ಷಿಯನ್ನು ದಿಃ07.08.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆ : ಶ್ರೀ.ಟಿ.ಟಿ.ಎಮ್ ವಕೀಲರಿಂದ ಆರೋಪಿ ಪರವಾಗಿ

1. 2008 ರಿಂದ 2010 ರ ಅವಧಿಯಲಿ ನಾನು ಪಲ್ಸ ಇನೂರೆನ್ಸ ಕಂಪನಿಯಲ್ಲಿ ನಾನು ಸಿನೀಯರ್ ಏಜೆಂಟ್ ಆಗಿ ಕೆಲಸ ನಿರ್ವಹಿಸುತ್ತಿದ್ದು, ನನ್ನ ಕೆಳಗಡೆ ಲಕ್ಷ್ಮಣ ಕುಲಗೋಡ ಅವರು ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಸದರಿ ಪಲ್ಸ ಇನೂರೆನ್ಸ ಕಂಪನಿ ಬಂದಾಗಿದ್ದು, ಲಕ್ಷ್ಮಣ ಕುಲಗೋಡು ಅವರು ಆತನಿಗೆ ಹಣ ನೀಡಬೇಕು ಎಂದು ನನಗೆ ತೊಂದರೆ ನೀಡಿ 1 ಚೆಕ್ಕನ್ನು ತೆಗೆದಕೊಂಡರು. ನನಗೆ ಪಿರ್ಯಾದಿದಾರನ ಯಾವುದೇ ಪರಿಚಯ ಇಲ್ಲ. ನಾನು ಪಿರ್ಯಾದಿದಾರನಿಂದ ಯಾವುದೇ ಹಣ ತೆಗೆದುಕೊಂಡಿಲ್ಲ. ಲಕ್ಷ್ಮಣ ಕುಲಗೋಡ ಅವರಿಗೆ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣ ಸಲ್ಲಿಸಿರುತ್ತಾರೆ.

2. ನಾನು ಈಗ ಸಿ.ಸಿ ನಂ.419/2018 ರಲ್ಲಿನ ದೂರು, ಆದೇಶಪುಟಗಳ ದೃಢೀಕೃತ ನಕಲುಗಳನ್ನು ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-1 ಮತ್ತು ನಿಡಿ-2 ಎಂದು, ಸಿ.ಸಿ.ನಂ.28/2018 ರಲ್ಲಿನ ಆದೇಶ ಪುಟ ಮತ್ತು ಸಿ.ಸಿ.ನಂ.9/2018 ರಲ್ಲಿನ ಆದೇಶ ಪುಟಗಳ ದೃಢೀಕೃತ ನಕಲುಗಳನ್ನು ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-3 ಮತ್ತು ನಿಡಿ-4 ಎಂದು, ಸಿ.ಸಿ.ನಂ.9/2018 ರಲ್ಲಿನ ದೂರಿನ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-5 ಎಂದ ಗುರುತಿಸಲಾಯಿತು. ಆದ್ದರಿಂದ ಸದರಿ ಪಿರ್ಯಾದಿಯನ್ನು ವಜಾ ಮಾಡಬೇಕಾಗಿ ವಿನಂತಿ.

ಪಿರ್ಯಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ